ಆರ್. ಮಧುಸೂದನ್, ಹಾಸನ

*ಎಲ್ಲರ ಹಣೆಬರಹವನ್ನು ಬರೆಯುವ ಬ್ರಹ್ಮ ತನ್ನ ಹಣೆಯಲ್ಲಿ ಏನು ಬರೆದುಕೊಂಡಿದ್ದಾನೆ?*




'ಬ್ರಹ್ಮ – ತೊಗಲುಬೊಂಬೆ ತಯಾರಕ' ಎಂಬ ಬೋರ್ಡ್!

ರಮೇಶ. ಜ. ಬೊಂಗಾಳೆ, ಬೈಲಹೊಂಗಲ

*ಕಂಡಕ್ಟರ್ ಒಮ್ಮೆ ಶಿಳ್ಳೆ ಹೊಡೆದರೆ ಬಸ್ ನಿಲ್ಲುತ್ತೆ; ಎರಡು ಬಾರಿ ಹೊಡೆದರೆ ಹೋಗುತ್ತೆ; ಮೂರು ಬಾರಿ ಹೊಡೆದರೆ ಏನಾಗುತ್ತೆ ಸಾರ್?*

ನಿಂತು ನಿಂತು ಹೋಗುತ್ತೆ!

ಬಿ. ಚಂದ್ರೇಗೌಡ, ಬೆಂಗಳೂರು

*ಅತ್ಯಂತ ಸುಂದರ ವಸ್ತು ಯಾವುದು?*

ಪರಪತ್ನಿ!

ಕೆ.ವಿ.ಶಿವಕುಮಾರ್ ಕಾಳೀಹುಂಡಿ, ಮೈಸೂರು

*ಅಳಿದಮೇಲೆ ಉಳಿಯುವುದು ಯಾವುದು ಸಾರ್?*

ಡೆತ್ ಸರ್ಟಿಫಿಕೇಟ್!

ನವಿರವಿ, ಬಾಳೆಹೊನ್ನೂರು

*ಮಹಾರಾಜರ ಕಾಲದ ಮಂತ್ರಿಗಳಿಗೂ, ಈಗಿನ ಕಾಲದ ಮಂತ್ರಿಗಳಿಗೂ ಏನು ವ್ಯತ್ಯಾಸ?*



ಆಗಿನ ಮಂತ್ರಿಗಳು ರಾಜ್ಯಭಾರದಲ್ಲಿ ನಿಪುಣರು; ಈಗಿನ ಮಂತ್ರಿಗಳು ರಾಜ್ಯಕ್ಕೆ ಭಾರವಾಗುವುದರಲ್ಲಿ ನಿಪುಣರು!

ಜಾಕೋಬ್ ಡಿಸೋಜ, ಕುರುವಳ್ಳಿ

*ಡೊಂಕು ಬಾಲದ ನಾಯಕರು ಹೇಗಿರುತ್ತಾರೆ?*

ನುಡಿಯಲ್ಲಿ ಕೊಂಕು, ನಡೆಯಲ್ಲಿ ಡೊಂಕು, ಬುದ್ಧಿಯಲ್ಲಿ ಮಂಕು!

ಎಸ್. ಶ್ರೀಧರ್, ಬೆಂಗಳೂರು

*ಪ್ರೀತಿ ಕಳೆದುಕೊಂಡವರಿಗೆ ಪ್ರೀತಿ ಎಲ್ಲಿ ಸಿಗುತ್ತದೆ?*

ಆ ನೆನಪಿಗೆ ಬೆಚ್ಚಗಾಗುವ ಹೃದಯದಲ್ಲಿ!

ಪ್ರಹ್ಲಾದರಾಜು ಬುರ್ಲಿ, ದಾವಣಗೆರೆ

*ಜೀವನದಲ್ಲಿ ಕಷ್ಟಗಳೇ ಬರಬಾರದೆಂದರೆ ಏನು ಮಾಡಬೇಕು ಸಾರ್?*

'ಬರಬಾರದು' ಪದದಲ್ಲೇ 'ಬರ', 'ಬರಬಾದು' ಎರಡೂ ಇರುವಾಗ ಕಷ್ಟವಿಲ್ಲದ ಜೀವನ ಅಸಾಧ್ಯ ಬಿಡಿ!

ಜಯದೇವ ಹಲಕಿ, ಗೋಕಾಕ

*ನಿಮ್ಮ ನಿವೃತ್ತಿ ಯಾವಾಗ?*

ಪ್ರವೃತ್ತಿಗೆ ನಿವೃತ್ತಿ ಇರುವುದಿಲ್ಲ!

ಎಸ್.ಎನ್. ಮಹಾಬಲರಾವ್, ನರಸಿಂಹರಾಜಪುರ

*ಕೈ ಹಿಡಿದು ನಡೆಸೋಣವೆಂದರೆ ಹುಡುಗಿ ಕೈ ಕೊಡುತ್ತಿಲ್ಲವಲ್ಲಾ...?*

ನೀವು ಕೈ ಕೊಡುವುದಿರಲಿ, ಕೇವಲ ಉಗುರು ತೋರಿಸಿದರೆ ಹಸ್ತ ನುಂಗುವವರೆಂದು ಅವಳ ಅನುಭವವಂತೆ!

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

*ಯಮನ ವಾಹನ ಕೋಣವು ಸತ್ತರೆ ಯಮನು ಯಾವ ವಾಹನ ಉಪಯೋಗಿಸುವನು?*

ಆಂಬುಲೆನ್ಸ್!

ಕುಮಾರ ಚಲವಾದಿ, ಹೊಳೆನರಸಿಪುರ

*ಖನ್ನಡ ರಾಜ್ಯೋತ್ಸವದಂಥ ಖನ್ನಡ ಹುಳಿಸಲು ಮಾಥನಾಡುತ್ತಾರೆ, ಹಾಮೇಲೆ ಮರೆಯುದ್ದಾರೆ. ಹೇಕೆ?*

'ಹಚ್ಚೇವು ಕನ್ನಡದ ದೀಪ'ದ ಬದಲು 'ಕಟ್ಟೇವು ಕಾಸೆಳೆವ ಗುಂಪ' ಎಂಬ ಖನ್ನಡ ಭಕ್ಷಕ ಸಂಘಗಳಿಂದ ಹಿನ್ನೇನು ಹೆಕ್ಸ್‌ಪೆಕ್ಟ್ ಮಾಡಲಾದೀತು ಬಿಡಿ!

ಗುಡಿಬಂಡೆ ಪಾರ್ಥಸಾರಥಿ, ಬಾಗೇಪಲ್ಲಿ

*ಮದುವೆ ಎಂಬ ಜೀವಾವಧಿ ಶಿಕ್ಷೆಯಲ್ಲಿ ಪೆರೋಲ್ ಯಾವಾಗ ಸಾರ್?*

ಹೆಂಡತಿ ತವರಿಗೆ ಹೋದಾಗ!

ಪಿ.ಜಿ. ರಾವ್, ಶಿವಮೊಗ್ಗ

*ನಮ್ಮ ವೈರಿಗಳ ಹೆಸರನ್ನು ನಮ್ಮ ಮಕ್ಕಳಿಗೆ ಇಡಬೇಕಂತೆ. ಏಕೆ?*

ಹಾಗೇನಿಲ್ಲ; ಸಾಕಿದ ನಾಯಿಗೂ ಇಡಬಹುದು!

## ಬಹುಮಾನಿತ ಪ್ರಶ್ನೆ

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

*ತಾಯಿ ಸತ್ತಾಗಲೂ ಅಳದ ಮಾಡ್ರನ್ ಹುಡುಗಿಯರು ನಾಯಿ ಸತ್ತಾಗ ಅಳಲು ಕಾರಣವೇನು?*

ಅವಳಿಗೆ ತಾಯಿಯ ಹಿತನುಡಿ ಬೊಗಳುವಿಕೆಯಂತೆಯೂ, ನಾಯಿಯ ಬೊಗಳುವಿಕೆ ಹಿತವಾಗಿಯೂ ಕೇಳುವುದರಿಂದ!

ಅಭಿಷೇಕ. ರ. ಬೊಂಗಾಳೆ, ಬೈಲಹೊಂಗಲ

*ಕಷ್ಟ ಬಂದಾಗ ಮಾತ್ರ ಎಲ್ಲರೂ ದೇವರನ್ನು ನೆನೆಸಿಕೊಳ್ಳುತ್ತಾರೆ. ಏಕೆ ಸರ್?*

ಎಲ್ಲರೂ ಅಲ್ಲ, ಅಭಿಷೇಕ ಮಾಡಿದವರು ಮಾತ್ರ. ಮಿಕ್ಕಂತೆ ದೇವರುಗಳು ನೆನೆದಿರುವುದಿಲ್ಲ!

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು

*ತಾಯಿಯ ಕಣ್ಣೀರಿಗೂ, ಹೆಂಡತಿಯ ಕಣ್ಣೀರಿಗೂ ವ್ಯತ್ಯಾಸವೇನು?*

ಒಂದು ಕರುಳಿನ ಕರೆ, ಇನ್ನೊಂದು ಮಜಬೂರಿಯ ಮೊರೆ!

ಶಿವುಕುಮಾರ, ಸುರಪೂರ

*ಚುನಾವಣೆಗೂ, ಪರೀಕ್ಷೆಗೂ ಇರುವ ವ್ಯತ್ಯಾಸವೇನು?*



ಚುನಾವಣೆಗೆ ನಿಂತು–ಕೊಳ್ಳುತ್ತಾರೆ, ಪರೀಕ್ಷೆಗೆ ಕುಳಿತುಕೊಳ್ಳುತ್ತಾರೆ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

*ಮಹಾಭಾರತದ ಕಾಲದಲ್ಲಿ ಫ್ಯಾಮಿಲಿ ಪ್ಲ್ಯಾನಿಂಗ್ ಇದ್ದಿದ್ದರೆ?*

ಶ್ರೀಕೃಷ್ಣನೇ ಹುಟ್ಟದೆ ಭಗವದ್ಗೀತೆಯೇ ತಪ್ಪಿಹೋಗುತ್ತಿತ್ತು!

ಎಂ.ಎಸ್. ಮಂಜುನಾಥ್ ಅಣಜಿ, ಮಾಧನಬಾವಿ

*ವೈನ್‌ಗೂ, ಡಿವೈನ್‌ಗೂ ಇರುವ ವ್ಯತ್ಯಾಸವೇನು?*

ಹಣ್ಣು ಮಾಗಿದರೆ ವೈನ್, ಮನಸ್ಸು ಮಾಗಿದರೆ ಡಿವೈನ್!

■ ರಾಮ್